

## ಎಂ.ಎಸ್. ವೇದಾ

ಕವಿತೆ, ಕತೆ, ಕಾದಂಬರಿ, ನಾಟಕಗಳು ಸೇರಿದಂತೆ ವಿವಿಧ ಪ್ರಕಾರಗಳಲ್ಲಿ ಬರೆದಿರುವ ವೇದಾ ಪ್ರಯೋಗಶೀಲ ಲೇಖಕಿ. ಕನ್ನಡ ಲೇಖಕ ಬಿ. ಪುಟ್ಟಸ್ವಾಮಯ್ಯ ಅವರ ನಾಟಕ ಹಾಗೂ ಕಾದಂಬರಿಗಳ ಕುರಿತು ಪಿಎಚ್.ಡಿ. ಮಾಡಿದ್ದಾರೆ. 'ಪ್ರೀತಿ ಮತ್ತು ಸಾವು', 'ಪಾಲು', 'ಬಿಳಿಯೆಣ್ಣ ಮತ್ತು ದುಂಡವ್ವನ ದೆವ್ವ', 'ಮುಳ್ಳ ಮನೆಯ ಮೇಲೆ' ಎಂಬ ಕಥಾಸಂಕಲನಗಳನ್ನು, 'ಜಮೀನು', 'ಜಯ', 'ಕಪ್ಪುಕಿವಿಯ ಬಿಳಿಯ ಕುದುರೆಗಳು', 'ರಾಜ ಒಡೆಯರ್' ಎಂಬ ಕಾದಂಬರಿಗಳನ್ನು ಬರೆದಿದ್ದಾರೆ. 'ಕಾವ್ಯಕೂಸು', 'ಗಂಗೋತ್ರಿಯಲ್ಲಿ', 'ಬಿಳಲುಗಳು' 'ದಾಖಲಾಗುವುದು ಬೇಡ' ಕವಿತೆಗಳ ಸಂಕಲನಗಳನ್ನು ಮತ್ತು 'ಉತ್ತರ ಶಾಕುಂತಲಾ' ಎಂಬ ನಾಟಕವನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಮೈಸೂರಿನ ಮಹಾರಾಣಿ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಸಹ ಪ್ರಾಧ್ಯಾಪಕಿ.

ಅವರಿಗೇನಾರಾ ಕಿಸ್ರಾದರೆ ನೆಟ್ಟಗೆ ಬಂದು ನಮ್ಮಗೋಳ ಕೊಚ್ಚಾದು, ತರಿಯಾದು, ಹಚ್ಚಾದು, ಉರ್ಯಾದು...' ಶಿವಲಿಂಗೇಗೌಡರು ಮುಸುಕಿದ ನಿಶ್ಯಬ್ದವನ್ನು ನಿಧಾನವಾಗಿ ಸರಿಸತೊಡಗಿದಾಗ ನಾಣಿ ಬಹಳ ಶೀಘ್ರವಾಗಿ ಕೋಪಗೊಂಡಿದ್ದ. 'ಅದೇನು ಗೌಡರೆ ಹೀಗ್ ಮಾತಾಡ್ತೀರಿ? ಎಂದಾದ್ರೂ ನಾವೇ ಮೊದಲಾಗಿ ಅವರ ಮೇಲೆ ಬಿದ್ದದ್ದುಂಟಾ? ನೀವೇ ಬೆರಳು ಮಡಚಿ ಹೇಳಿ ನೋಡುವಾ. ಅವ್ರೆ ಮಾತೆತ್ತಿದರೆ ಏಕ್ ಬಾತ್ ದೋ ಥುಕಡಾ ಅಂತಾ ಬರಾದಲ್ವಾ?'

ಹಿರಿಯರ ಮುಖಗಳೆಲ್ಲಾ ಈ ಪಡ್ಡೆ ಹುಡುಗನ ಅಧಿಕ ಪ್ರಸಂಗವನ್ನು ಕಂಡು ಧುಮುಗುಟ್ಟಿದವು. ಸ್ವತಃ ಅವನ ಸಹಪಾಟಿಗಳಿಗೇ ನಾಣಿಯ ಈ ವರ್ತನೆ ಆ ಸಂದರ್ಭಕ್ಕೆ ತಕ್ಕದ್ದು ಎನ್ನಿಸಲಿಲ್ಲ. 'ಈಗ ಗೌಡರು ಹಾಗಂತ ಹೇಳಿದ್ರೋ? ಸುಮ್ನೆ ಕುಂತ್ಕೋ. ಕಾಮನ ಸುಡುವಾಗ ಆಡೋ ಮೊಲ್ಲಾಗ್ಗರದ ಹಂಗೇ ಈಗಲೂ ಮಾತನಾಡ ಬೇಡಾ' ವಿಶ್ವ ಮುಖ ಸಿಂಡರಿಸಿ ಗೆಳೆಯನ ದೌರ್ಬಲ್ಯವನ್ನು ತೋರಿಸುತ್ತಾ ಬಾಯಿ ಮುಚ್ಚಿಸಿದ.

'ಇದೂ ಸರಿಯಾದ ಮಾತು ವಿಶ್ವಣ್ಣ, ಇದು ಬಹಳ ಗಂಭೀರವಾದ ವಿಷಯ. ನಾವು ಏನು ಮಾತಾಡಿದ್ರೂ ನಮ್ದೇ ತಪ್ಪಾಯ್ತದೆ. ಹೆಣಾ ಎತ್ತಿ ಯಾರು? ಎತ್ತ? ಅಂತ ನೋಡಾತಂಕಾ ನಮ್ಮೋರು ಯಾರೂ ಕಮ್ಮಕ್ ಕಿಮ್ಮಕ್ ಅನ್ನಬಾರ್ದು. ತಿಳೀತಾ?' ಗೌಡರ ನುಡಿ ಮುಗಿವ ವೇಳೆಗೆ ಪರಿಸ್ಥಿತಿಯ ಗಹನತೆಯೆಲ್ಲಾ ಒಮ್ಮೆಲೇ ಅರಿವಾದಂತೆ ಶಾನುಭೋಗ ರಾಜಪ್ಪನವರ ಮುಖ ಬೆಳ್ಳಗಾಗಲು ಆರಂಭಿಸಿತ್ತು. ನಡುಗುತ್ತಿದ್ದ ಕಾಲುಗಳನ್ನು ಎಲ್ಲ ಬಲ ಬಿಟ್ಟು ಎರಡೂ ಕೈಗಳಿಂದ ಅಮುಕಿ ಹಿಡಿದು ಚಳಿ ಅನುಭವಿಸುತ್ತಿರುವಂತೆ ಕಂಗಾಲಾಗಿ ಕುಳಿತುಬಿಟ್ಟರು.

ರಾಜಪ್ಪನ ಮಗ ಗೋಪಿಗೂ, ಬುಡನ್‌ಸಾಬರ ಮಗಳು ಅಂಜುಂಭಾನುವಿಗೂ ಇದ್ದ ಸ್ನೇಹ ಎಲ್ಲರಿಗೂ ತಿಳಿದಿತ್ತು. ಇತ್ತೀಚಿನ ದಿನಗಳಲ್ಲಿ ಅದು ಪ್ರೇಮಕ್ಕೆ ತಿರುಗಿ ಮದುವೆಯ ಮಾತುಕತೆಯತನಕ ಬಂದು ಮುಟ್ಟಿತ್ತು. ರಾಜಪ್ಪ ಮಗನಿಗೆ ಮಾತಲ್ಲಿ, ಕೈಯಲ್ಲಿ, ಕಾಲಲ್ಲಿ, ಕೋಲಿನಲ್ಲಿ... ಕೈಗೆ ಸಿಕ್ಕಿದ್ದರಲ್ಲಿ ಬುದ್ಧಿ ಹೇಳಿದ್ದರು. ಗೋಪಿಯ ಹಟ ನಿಂತಿರಲಿಲ್ಲ. ಒಂದು ವಾರದ